ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ
ಮೊದಲನೇ ರಾಜ್ಯ ಮಟ್ಟದ ಸಮ್ಮೇಳನ

# ಸ್ಮರಣ ಸಂಚಿಕೆ



Karnataka State Government Disabled Employees Association
Renukaradhya S
Indresh R

**ದಿನಾಂಕ : 10–11–95**

**ಸ್ಥಳ : ವಿಧಾನ ಸೌಧ ಬಾಂಕ್ವೆಟ್ ಹಾಲ್**

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ)
ಆರೋಗ್ಯ ಇಲಾಖೆ ಆವರಣ, ಆನಂದರಾವ್ ವೃತ್ತ
ಬೆಂಗಳೂರು–9



# ಮುನ್ನುಡಿ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ ಬಹುದಿನಗಳ ಕನಸು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಮ್ಮೇಳನ ನಡೆಸಬೇಕೆಂಬುದು ಇದೀಗ ನನಸಾಗುತ್ತಿದೆ. ನಮ್ಮ ಸಂಘವು ರಾಜ್ಯದ ಅಂಗವಿಕಲ ಸರ್ಕಾರಿ ನೌಕರರ ಶ್ರೇಯೋಭಿವೃದ್ಧಿಗಾಗಿ ಕಳೆದ ಹತ್ತು ವರ್ಷಗಳಿಂದ ಕಾರ್ಯನಿರ್ವಹಿಸುತ್ತಾ ಬಂದಿದ್ದು, ಕೆಲವೊಂದು ಬೇಡಿಕೆಗಳನ್ನು ಪಡೆದುಕೊಳ್ಳಲು ನಮಗೆ ಸಾಧ್ಯವಾಗಿದೆ. ಇನ್ನೂ ಕೆಲವು ಅತಿ ಮಹತ್ವದ ಬೇಡಿಕೆಗಳು ಈಡೇರಬೇಕಾಗಿವೆ.

ನಮ್ಮ ಸಂಘವನ್ನು ಸಂಘಟನಾತ್ಮಕವಾಗಿ ಇನ್ನೂ ವಿಶಿಷ್ಟಗೊಳಿಸಲು ಎಲ್ಲಾ ಸರ್ಕಾರಿ ಅಂಗವಿಕಲ ನೌಕರರನ್ನು ಸದಸ್ಯರನ್ನಾಗಿ ಮಾಡಿಕೊಂಡು ಒಂದು ರಾಜ್ಯ ಮಟ್ಟದ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಸಬೇಕೆಂದು ಕಳೆದ ಎರಡು ವರ್ಷಗಳಿಂದಲೂ ಪ್ರಯತ್ನ ಮಾಡುತ್ತಿದ್ದೇವೆ. ಈ ನಿಟ್ಟಿನಲ್ಲಿ ಕೆಲವು ಜಿಲ್ಲಾ ಮಟ್ಟದ ಸಮ್ಮೇಳನಗಳು ಸಹ ನಡೆದಿವೆ. ಆದರೆ ಕೆಲವೊಂದು ಕಾರಣಗಳಿಂದಾಗಿ ರಾಜ್ಯ ಮಟ್ಟದ ಸಮ್ಮೇಳನ ಮುಂದಕ್ಕೆ ಹೋಗಿ, ಈಗ ರಾಜ್ಯ ಮಟ್ಟದ ಸಮ್ಮೇಳನ ಬೆಂಗಳೂರಿನ ಹೆಮ್ಮೆಯ ವಿಧಾನಸೌಧದಲ್ಲಿ ನಡೆಯುತ್ತಿರುವುದು ನನಗೆ ಸಂತೋಷವನ್ನು ಉಂಟು ಮಾಡಿದೆ.

ಅಂಗವಿಕಲ ನೌಕರರು ಸಮ್ಮೇಳನ ನಡೆಸುವ ಕಾರ್ಯ ಅತ್ಯಂತ ಕಷ್ಟದ ಕೆಲಸ. ಈ ಸಮ್ಮೇಳನದ ಯಶಸ್ಸಿಗೆ ಅನೇಕ ಮಹನೀಯರಿಂದ ಸಹಕಾರ ದೊರಕಿದೆ. ಅದರಲ್ಲೂ ಶ್ರೀ ಹರಿ ಖೋಡೆಯವರು ಈ ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿನಿಧಿಗಳಿಗೆ ಉಚಿತ ಊಟ, ಉಪಹಾರ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಅವರ ಈ ಉದಾರ ಕೊಡುಗೆಯನ್ನು ನಾನು ಗೌರವಪೂರ್ವಕವಾಗಿ ಸ್ಮರಿಸುತ್ತೇನೆ.


ನಮ್ಮ ಸಂಘದ ಆಶ್ರಯದ ಈ ಮೊದಲನೇ ಸಮ್ಮೇಳನದ ಸಂದರ್ಭದಲ್ಲಿ ಹೊರತರುತ್ತಿರುವ ಸ್ಮರಣ ಸಂಚಿಕೆಯು ಅಂಗವಿಕಲ ನೌಕರ ಬಾಂಧವರ ಕೈಪಿಡಿಯಾಗಿ ಇರುತ್ತದೆ ಎಂದು ಭಾವಿಸುತ್ತೇನೆ. ಈ ಸ್ಮರಣ ಸಂಚಿಕೆಯನ್ನು ಉಚಿತವಾಗಿ ಮುದ್ರಿಸಿಕೊಡುತ್ತಿರುವ ಸರ್ಕಾರಕ್ಕೂ, ನಮ್ಮ ಸಂಘದ ಎಲ್ಲಾ ಪದಾಧಿಕಾರಿಗಳಿಗೂ, ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೂ, ಜಿಲ್ಲಾ ಅಧ್ಯಕ್ಷರುಗಳಿಗೂ, ಈ ಸ್ಮರಣ ಸಂಚಿಕೆಗೆ ಜಾಹೀರಾತು ನೀಡಿದ ಅಭಿಮಾನಿಗಳಿಗೂ, ಹಿತೈಷಿ ಮಿತ್ರರಿಗೂ ನನ್ನ ಆದರದ ಅಭಿನಂದನೆಗಳು. ಈ ಸ್ಮರಣ ಸಂಚಿಕೆಯನ್ನು ಹೊರತರಲು ಶ್ರಮಿಸಿದ ಸಂಪಾದಕ ಮಿತ್ರರಾದ ಎಸ್. ರೇಣುಕಾರಾಧ್ಯರಿಗೂ, ಈ ಸ್ಮರಣ ಸಂಚಿಕೆ ಹಾಗೂ ಸಮ್ಮೇಳನದ ಸಿದ್ಧತೆಗಾಗಿ ಅನೇಕ ಜನರು ಶ್ರಮಿಸಿದ್ದಾರೆ. ಅವರಲ್ಲಿ ಗೌರವಾಧ್ಯಕ್ಷರಾದ ಶ್ರೀ ಬೋರೇಗೌಡರು, ಉಪಾಧ್ಯಕ್ಷರಾದ ಶ್ರೀ ಜಯದೇವಯ್ಯನವರು, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಲಿಂಗೇಗೌಡರು, ಖಜಾಂಚಿ ಶ್ರೀ ಮುನಿಯಪ್ಪನವರು, ಶ್ರೀ ಪುರುಷೋತ್ತಮರವರು ಹಾಗೂ ಶ್ರೀ ಮಂಚೇಗೌಡರು, ಶ್ರೀ ಮುನಿರಾಜು, ಶ್ರೀ ಚೋಮಾನಾಯಕ್‌ರವರು ಮುಂತಾದವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ರಾಜ್ಯ ಸರ್ಕಾರಿ ಅಂಗವಿಕಲ ನೌಕರ ಬಾಂಧವರು ಈ ಸ್ಮರಣ ಸಂಚಿಕೆಯನ್ನು ಆದರದಿಂದ ಸ್ವೀಕರಿಸುತ್ತಾರೆ ಎಂದು ಆಶಿಸುತ್ತೇನೆ.

ಕೆ. ಕೆಂಚೇಗೌಡ,
ಅಧ್ಯಕ್ಷರು,
ಕರ್ನಾಟಕ ರಾಜ್ಯ ಅಂಗವಿಕಲ ಸರ್ಕಾರಿ ನೌಕರರ ಸಂಘ.

ಬೆಂಗಳೂರು
ದಿ. 1–11–1995

Karnataka State Government Disabled Employees Association
Renukaradhya S
Indresh R



# ಸಂಪಾದಕೀಯ

ಕರ್ನಾಟಕ ರಾಜ್ಯ ಅಂಗವಿಕಲ ಸರ್ಕಾರಿ ನೌಕರರ ಸಂಘವು ಕಳೆದ 10 ವರ್ಷಗಳಿಂದ ರಾಜ್ಯ ಅಂಗವಿಕಲ ಸರ್ಕಾರಿ ನೌಕರರ ಸಮಸ್ಯೆಗಳಿಗೆ ಸ್ಪಂದಿಸಿ, ಕಾರ್ಯನಿರ್ವಹಿಸುತ್ತಾ ಬಂದಿದೆ. ರಾಜ್ಯ ಮಟ್ಟದ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಸುತ್ತಿರುವ ಸಂದರ್ಭದಲ್ಲಿ ಒಂದು ಸ್ಮರಣ ಸಂಚಿಕೆಯನ್ನು ಹೊರತರಬೇಕೆಂಬ ಸಂಘದ ಕಾರ್ಯಕಾರಿ ಸಮಿತಿಯ ತೀರ್ಮಾನದಂತೆ ಅದರ ಸಂಪಾದಕತ್ವದ ಹೊಣೆಯನ್ನು ನನಗೆ ವಹಿಸಿದ್ದನ್ನು, ಸಮರ್ಥನೀಯವಾಗಿ ನಿರ್ವಹಿಸಲು ಪ್ರಯತ್ನಿಸಿದ್ದೇನೆ.

ಈ ಸ್ಮರಣ ಸಂಚಿಕೆಯು ಮುಖ್ಯವಾಗಿ ಅಂಕವಿಕಲ ನೌಕರರ, ಧ್ವನಿಯಾಗಿ ಮೂಡಿ ಬರಬೇಕು. ಅವರ ಸೇವಾ ವಿಷಯಗಳು ಮತ್ತಿತರ ಸವಲತ್ತುಗಳ ಬಗ್ಗೆ ಮಾಹಿತಿ ನೀಡುವ ಕೈಪಿಡಿಯಂತಿರಬೇಕು ಎನ್ನುವ ಅಭಿಲಾಷೆಯೊಂದಿಗೆ, ಅಂಗವಿಕಲ ನೌಕರರಿಗೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿರುವ ಆದೇಶಗಳು ಸುತ್ತೋಲೆ, ವಿವಿಧ ರಿಯಾಯಿತಿಗಳ ನಮೂನೆಗಳನ್ನು ಅಂಗವಿಕಲ ನೌಕರರಿಗೆ ಒಂದು ಕಡೆ ಸಿಕ್ಕುವಂತಿರಬೇಕು ಎಂದು ಅವುಗಳನ್ನು ಈ ಸಂಚಿಕೆಯಲ್ಲಿ ಸೇರಿಸಿದ್ದೇವೆ. ಏಕೆಂದರೆ ಇನ್ನೂ ಹಲವಾರು ಅಂಗವಿಕಲ ನೌಕರರಿಗೆ ಇವುಗಳ ಪ್ರತಿಗಳು ಸಿಕ್ಕಿಲ್ಲ. ಸರ್ಕಾರ ನೀಡಿರುವ ಸವಲತ್ತುಗಳನ್ನು ಅರ್ಹರಿಗೆ ನೀಡುವಲ್ಲಿ ಉಂಟಾಗಿರುವ ವಿಳಂಬಗಳು ಸಹ ಸಾಕಷ್ಟು ನಮ್ಮ ಸಂಘದ ಗಮನಕ್ಕೆ ಬಂದಿವೆ. ಆದ್ದರಿಂದ ಇವುಗಳು ಒಂದು ಕಡೆ ಸಿಕ್ಕುವಂತೆ ಕ್ರೋಢೀಕರಿಸಿ ಪ್ರಕಟಿಸಿದ್ದೇವೆ.

ಈ ಸಂಚಿಕೆಯಲ್ಲಿ ಅಂಗವಿಕಲ ನೌಕರರೇ ಬರೆದಿರುವ ಕವನ, ಲೇಖನ, ಚುಟುಕ, ಹಾಸ್ಯ ಬರಹಗಳನ್ನು ಪ್ರಕಟಿಸಿದ್ದೇವೆ. ಎಲ್ಲ ಅಂಗವಿಕಲ ಲೇಖಕರಿಗೂ ಧನ್ಯವಾದಗಳು.

ಈ ಸ್ಮರಣ ಸಂಚಿಕೆಯನ್ನು ಉಚಿತವಾಗಿ ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸಿ ಕೊಡಲು ಘನ ಸರ್ಕಾರವು ಆದೇಶ ನೀಡಿ, ಅಂಗವಿಕಲರ ಬಗ್ಗೆ ಸರ್ಕಾರಕ್ಕಿರುವ ಕಾಳಜಿಯನ್ನು ಮತ್ತೊಮ್ಮೆ ವ್ಯಕ್ತಪಡಿಸಿದೆ. ಸರ್ಕಾರದ ಈ ಔದಾರ್ಯಕ್ಕೆ ನಮ್ಮ ಸಂಘ ಚಿರಋಣಿಯಾಗಿದೆ.


ಈ ಸ್ಮರಣ ಸಂಚಿಕೆಗೆ, ಶುಭಸಂದೇಶಗಳನ್ನು ನೀಡಿ ಹರಸಿರುವ ಸನ್ಮಾನ್ಯ ರಾಜ್ಯಪಾಲರು, ಸನ್ಮಾನ್ಯ ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಇತರ ಗಣ್ಯರನ್ನು ನಾವು ಗೌರವದಿಂದ ಸ್ಮರಿಸುತ್ತೇವೆ.

ಈ ಸಂಚಿಕೆಗೆ ಜಾಹಿರಾತುಗಳನ್ನು ನೀಡಿರುವ ಸರ್ಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರಿಗೂ ಹಾಗೆಯೇ, ಎಲ್ಲ ಜಾಹಿರಾತುದಾರರಿಗೂ ನಾವು ಆಭಾರಿಗಳಾಗಿದ್ದೇವೆ.

ಈ ಸುಂದರ ಸ್ಮರಣ ಸಂಚಿಕೆಯನ್ನು ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಟ್ಟು ಮಹದುಪಕಾರ ಮಾಡಿರುವ ಸರ್ಕಾರಿ ಮುದ್ರಣಾಲಯದ ಅಧಿಕಾರ ವರ್ಗದವರು ಮತ್ತು ಸಿಬ್ಬಂದಿಗಳ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ. ಮುಖಪುಟ ವಿನ್ಯಾಸ ರಚಿಸಿದ ಕಲಾವಿದ ಮರಿಯಪ್ಪ ಗುಳೆಜ್ಜಿಯವರಿಗೂ ನಮ್ಮ ಧನ್ಯವಾದಗಳು. ಈ ಸ್ಮರಣ ಸಂಚಿಕೆಯನ್ನು ಅಂಗವಿಕಲ ನೌಕರರು ಆದರದಿಂದ ಸ್ವಾಗತಿಸುತ್ತೀರಿ ಎಂದು ಆಶಿಸುತ್ತೇವೆ.

ಎಸ್. ರೇಣುಕಾರಾಧ್ಯ,
ಸಂಪಾದಕರು.

Karnataka State Government Disabled Employees Association
Renukaradhya S
Indresh R



ರಾಜ್ಯಪಾಲರ ಸಚಿವಾಲಯ, ರಾಜ ಭವನ

ಅಂಚೆ ಪೆಟ್ಟಿಗೆ ಸಂಖ್ಯೆ 5033, ಬೆಂಗಳೂರು–1

GOVERNOR'S SECRETARIAT,
P.B. NO. 5033
RAJ BHAVAN, BANGALORE-1

13ನೇ ಸೆಪ್ಟೆಂಬರ್ 1995


Karnataka State Government Disabled Employees Association
Renukaradhya S
Indresh R

## ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು ತನ್ನ 10ನೇ ವಾರ್ಷಿಕೋತ್ಸವದ ಅಂಗವಾಗಿ ಮೊದಲನೇ ರಾಜ್ಯ ಮಟ್ಟದ ಸಮ್ಮೇಳನವನ್ನು ಏರ್ಪಡಿಸುತ್ತಿರುವ ಬಗ್ಗೆ ಮಾನ್ಯ ರಾಜ್ಯಪಾಲರು ಬಹಳ ಸಂತೋಷಗೊಂಡಿದ್ದಾರೆ.

ಮಾನ್ಯ ರಾಜ್ಯಪಾಲರು ಸಂಘದ ಸದಸ್ಯರುಗಳಿಗೆ ಮತ್ತು ಪ್ರತಿನಿಧಿಗಳಿಗೆ ತಮ್ಮ ಶುಭಾಶಯಗಳನ್ನು ತಿಳಿಸುತ್ತಾ ಸಮ್ಮೇಳನವು ಯಶಸ್ವಿಯಾಗಲೆಂದು ಹಾರೈಸಿದ್ದಾರೆ.

ಅಜೀಜುಲ್ಲಾ ಬೇಗ್,
ರಾಜ್ಯಪಾಲರ ವಿಶೇಷ ಕರ್ತವ್ಯಾಧಿಕಾರಿ.



ವಿಧಾನ ಸೌಧ,
ಬೆಂಗಳೂರು–560 001
ದಿನಾಂಕ 6ನೇ ಸೆಪ್ಟೆಂಬರ್ 1995
ಸಿಎಂಪಿ 1259/ 95

# ಸಂದೇಶ


Karnataka State Government Disabled Employees Association
Renukaradhya S
Indresh R

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು ತನ್ನ ಮೊದಲನೆಯ ಮಹಾ ಸಮ್ಮೇಳನವನ್ನು ಆಚರಿಸುತ್ತಿರುವುದು ಕೇಳಿ ನನಗೆ ಸಂತೋಷವಾಗಿದೆ.

ಅಂಗವಿಕಲರಿಗೂ ಸಹಾನುಭೂತಿ, ಪಶ್ಚಾತ್ತಾಪಗಳಿಗಿಂತಲೂ ಹೆಚ್ಚಾಗಿ ಅವರಲ್ಲಿ ಆತ್ಮಬಲ, ಮನೋಸ್ಥೈರ್ಯ ತುಂಬುವುದು ಅತ್ಯವಶ್ಯವಾಗಿದೆ. ಅಂಗವಿಕಲರೂ ಸಹಾ ಈ ದೇಶದ ಗೌರವಾನ್ವಿತ ನಾಗರಿಕರು ಎಂಬುದನ್ನು ಮರೆಯದೆ ಜನರು ಅವರೊಂದಿಗೆ ಗೌರವದಿಂದ ವರ್ತಿಸಬೇಕಾದುದು ಅತೀ ಅವಶ್ಯಕ. ಈ ನಿಟ್ಟಿನಲ್ಲಿ ತಾವು ಆಚರಿಸುತ್ತಿರುವ ಮಹಾ ಸಮ್ಮೇಳನ ನಿಕರ ನಿಲುವುಗಳನ್ನು ತಾಳಲಿ ಎಂದು ಹಾರೈಸುತ್ತೇನೆ.

ಈ ಸಂದರ್ಭದಲ್ಲಿ ಹೊರ ತರಲಿರುವ ಸ್ಮರಣ ಸಂಚಿಕೆ ಸುಂದರವಾಗಿ ಮೂಡಿ ಬರಲೆಂದು ಹಾರೈಸುತ್ತೇನೆ.

ಹೆಚ್.ಡಿ. ದೇವೇಗೌಡ,
ಮುಖ್ಯಮಂತ್ರಿ.



No. DCM/127/95

ದೂರವಾಣಿ : ಕಛೇರಿ : ೨೨೫೦೬೩೭

ನಿವಾಸ : ೨೨೫೮೯೨೮

ವಿಧಾನ ಸೌಧ, ಬೆಂಗಳೂರು – ೫೬೦ ೦೦೧

ದಿನಾಂಕ : 5ನೇ ಆಗಸ್ಟ್ 1995

# ಶುಭ ಸಂದೇಶ

ಕರ್ನಾಟಕ ರಾಜ್ಯ ಅಂಗವಿಕಲ ಸರ್ಕಾರಿ ನೌಕರರ ಸಂಘವು ತನ್ನ ಮೊದಲನೆಯ ರಾಜ್ಯಮಟ್ಟದ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಸಲಿರುವುದನ್ನು ತಿಳಿದು ಸಂತೋಷವಾಗಿದೆ.

ಅಂಗವಿಕಲತೆ ಶಾಪವಲ್ಲ. ಎಲ್ಲರಂತೆ ಸಮಾನ ಅವಕಾಶಗಳು ಅವರಿಗೆ ದೊರೆತರೆ ಆತ್ಮಾಭಿಮಾನದಿಂದ ಬದುಕಬಲ್ಲರು. ಈ ದಿಸೆಯಲ್ಲಿ ವ್ಯವಸ್ಥೆಯಾಗಿರುವ ರಾಜ್ಯಮಟ್ಟದ ಸಮ್ಮೇಳನದಲ್ಲಿ ಅಂಗವಿಕಲರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಸೂಕ್ತ ನಿವಾರಣೋಪಾಯಗಳನ್ನು ಕಂಡುಕೊಳ್ಳುತ್ತದೆ ಎಂಬ ಆಶಯ ಹೊಂದಿದ್ದೇನೆ.

ಸಮ್ಮೇಳನದ ಸಂದರ್ಭದಲ್ಲಿ ಹೊರತರುತ್ತಿರುವ ಸ್ಮರಣ ಸಂಚಿಕೆಯು, ಅಂಗವಿಕಲರು ಸಮಾಜದಲ್ಲಿ ಆತ್ಮಾಭಿಮಾನಿಗಳಾಗಿ ಬದುಕಲು ಇರುವ ಅವಕಾಶಗಳ ಬಗೆಗೆ ಸ್ಪಷ್ಟ ಮಾಹಿತಿ ನಿರೂಪಿಸುವ ಕೈಪಿಡಿಯಾಗಿರುತ್ತದೆ ಎಂದು ಭಾವಿಸಿ, ಸಮ್ಮೇಳನ ಯಶಸ್ವಿಯಾಗಿ ನಡೆಯಲಿ ಎಂದು ಶುಭ ಹಾರೈಸುತ್ತೇನೆ.

ಜೆ. ಹೆಚ್. ಪಟೇಲ್,

ಉಪ ಮುಖ್ಯಮಂತ್ರಿ.

Karnataka State Government Disabled Employees Association
Renukaradhya S
Indresh R



ಸಂ/ಹಯೋಸ/ಶುಕಾ/ / 95

ದೂರವಾಣಿ : ಕಛೇರಿ : ೨೨೫೪೪೨೯
ನಿವಾಸ : ೩೩೫೩೫೨೪
೩೩೦೫೪೨೫


ವಿಧಾನ ಸೌಧ, ಬೆಂಗಳೂರು – ೫೬೦ ೦೦೧
ದಿನಾಂಕ : 7ನೇ ಸೆಪ್ಟೆಂಬರ್ 1995

# ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು ರಾಜ್ಯದ ಸಮಸ್ತ ಅಂಗವಿಕಲ ನೌಕರರುಗಳ ಶ್ರೇಯೋಭಿವೃದ್ಧಿಗಾಗಿ ಕಳೆದ ಹತ್ತು ವರ್ಷಗಳಿಂದ ದುಡಿಯುತ್ತಿರುವ ವಿಷಯ ತಿಳಿದು ಸಂತೋಷವಾಯಿತು. ತನ್ನ 10ನೇ ವಾರ್ಷಿಕೋತ್ಸವದ ಅಂಗವಾಗಿ 1995 ರ ನವೆಂಬರ್ ಮಾಹೆಯಲ್ಲಿ ಬೆಂಗಳೂರಿನಲ್ಲಿ ಏರ್ಪಡಿಸಿರುವ ಮೊದಲನೇ ರಾಜ್ಯ ಮಟ್ಟದ ಸಮ್ಮೇಳನವು ಯಶಸ್ವಿಯಾಗಿ ಜರುಗಲಿ, ಹಾಗೂ ಈ ಸಂದರ್ಭದಲ್ಲಿ ಹೊರತರಲಿರುವ ಸ್ಮರಣ ಸಂಚಿಕೆಯು ಉತ್ತಮ ಲೇಖನಗಳೊಂದಿಗೆ ಮೂಡಿಬರಲಿ ಎಂದು ಶುಭ ಹಾರೈಸುವೆನು.

ಸಿದ್ದರಾಮಯ್ಯ,
ಹಣಕಾಸು ಮತ್ತು ಯೋಜನಾ ಸಚಿವರು.

Karnataka State Government Disabled Employees Association
Renukaradhya S
Indresh R



ನಂ. ಎಂಸಿ/ಎಂ/2906/ 1995

ದೂರವಾಣಿ : ಕಛೇರಿ : ೨೨೬೯೧೨೮

ವಿಧಾನ ಸೌಧ, ಬೆಂಗಳೂರು – ೫೬೦ ೦೦೧

ದಿನಾಂಕ : 8ನೇ ಸೆಪ್ಟೆಂಬರ್ 1995

# ಶುಭ ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ, ಆನಂದ್ ರಾವ್ ವೃತ್ತ, ಬೆಂಗಳೂರು, ಕಳೆದ 10 ವರ್ಷಗಳಿಂದ ರಾಜ್ಯದ ಸಮಸ್ತ ಅಂಗವಿಕಲ ನೌಕರರ ಸಮಗ್ರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದು, ನವೆಂಬರ್ 1995 ರಲ್ಲಿ ಪ್ರಥಮ ಮಹಾಸಮ್ಮೇಳನವನ್ನು ಸಂಘಟಿಸಿದ್ದು, ಅದರ ಅಂಗವಾಗಿ ಸ್ಮರಣ ಸಂಚಿಕೆ ಪ್ರಕಟಿಸುತ್ತಿರುವುದು ಅತ್ಯಂತ ಸಂತೋಷದಾಯಕ ಸಂಗತಿ.


ಸದರಿ ಸಂಘವು ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಅಂಗವಿಕಲ ನೌಕರರ ಸಮಗ್ರ ಅಭಿವೃದ್ಧಿಗಾಗಿ ಪರಿಶ್ರಮಿಸಿ ಅವರು ಇತರರೊಂದಿಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಮಾನಾಂತರ ಸ್ಥಾನಮಾನಗಳನ್ನು ಹೊಂದುವಂತಾಗಲಿ ಎಂದು ಹೃತ್ಪೂರ್ವಕವಾಗಿ ಶುಭ ಹಾರೈಸುತ್ತೇನೆ.

Karnataka State Government Disabled Employees Association
Renukaradhya S
Indresh R

ತಮ್ಮ ವಿಶ್ವಾಸಿ,

**ಶಿ. ಶಿ. ಪಾಟೀಲ,**

ಸಹಕಾರ ಸಚಿವರು.



ಕೃ.ಸ.ಸ./3405/95

ದೂರವಾಣಿ : ಕಛೇರಿ : ೨೨೫೯೧೮೩
ನಿವಾಸ : ೨೨೦೩೦೯೨
೨೨೫೭೯೮೬

ವಿಧಾನ ಸೌಧ, ಬೆಂಗಳೂರು – ೫೬೦ ೦೦೧
ದಿನಾಂಕ : 7ನೇ ಸೆಪ್ಟೆಂಬರ್ 1995


# ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು ಕಳೆದ 10 ವರ್ಷಗಳಿಂದ ರಾಜ್ಯದ ಸಮಸ್ತ ಅಂಗವಿಕಲ ನೌಕರರ ಶ್ರೇಯೋಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಿದ್ದು, ಕಳೆದ 10 ವರ್ಷಗಳಲ್ಲಿ ಮಾಡಿದ ಸಾಧನೆಯ ಬಗ್ಗೆ ನವೆಂಬರ್ 1995 ರ ಮಾಹೆಯಲ್ಲಿ ಬೆಂಗಳೂರಿನಲ್ಲಿ ಒಂದು ಸಮ್ಮೇಳನವನ್ನು ಏರ್ಪಡಿಸಿ ಒಂದು ಸುಂದರ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡುತ್ತಿರುವುದು ಸಮಯೋಜಿತವಾಗಿದೆ.

ಸಮ್ಮೇಳನವು ಯಶಸ್ವಿಯಾಗಿ ನಡೆಯಲೆಂದು ಹಾರೈಸುತ್ತೇನೆ.

ಸಿ. ಬೈರೇಗೌಡ,
ಕೃಷಿ ಸಚಿವರು.

Karnataka State Government Disabled Employees Association
Renukaradhya S
Indresh B



ದೂರವಾಣಿ : ಕಛೇರಿ : ೨೨೫೫೦೨೩

ನಿವಾಸ : ೨೨೦೫೧೯೬

ವಿಧಾನ ಸೌಧ, ಬೆಂಗಳೂರು–೫೬೦ ೦೦೧

ದಿನಾಂಕ : 26ನೇ ಅಕ್ಟೋಬರ್ 1995

# ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು 10ನೇ ವಾರ್ಷಿಕೋತ್ಸವದ ಅಂಗವಾಗಿ ಮೊದಲನೇ ರಾಜ್ಯ ಸಮ್ಮೇಳನ ಏರ್ಪಡಿಸಿರುವುದು ಹಾಗೂ ಈ ಸಂದರ್ಭದಲ್ಲಿ ಒಂದು ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವ ವಿಷಯ ತಿಳಿದು ಸಂತೋಷವಾಗಿದೆ.

ರಾಜ್ಯ ಅಂಗವಿಕಲ ನೌಕರರ ಶ್ರೇಯೋಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವ ಈ ಏಕೈಕ ಸಂಘಟನೆಯು ಗಮನೀಯ ಸೇವೆಯನ್ನು ಈ ಹತ್ತು ವರ್ಷಗಳಲ್ಲಿ ಸಲ್ಲಿಸಿದೆ. ಮುಂದೆ ಇನ್ನೂ ಹೆಚ್ಚಿನ ಶ್ರೇಯೋಭಿವೃದ್ಧಿ ಕಾರ್ಯಗಳನ್ನು ಈ ಸಂಘಟನೆ ಮಾಡಲಿ ಹಾಗೂ ಸಮ್ಮೇಳನವು ಯೋಜಿತ ರೀತಿಯಲ್ಲಿ ನಡೆದು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

ಪಿ.ಜಿ.ಆರ್. ಸಿಂಧ್ಯ,

ಗೃಹ ಸಚಿವರು.

Karnataka State Government Disabled Employees Association
Renukaradhya S
Indresh R




ದೂರವಾಣಿ : ಕಛೇರಿ : ೨೨೫೬೦೬೩

ನಿವಾಸ : ೨೨೦೫೭೮೧

ವಿಧಾನ ಸೌಧ, ಬೆಂಗಳೂರು–೫೬೦ ೦೦೧


ದಿನಾಂಕ : 27ನೇ ಅಕ್ಟೋಬರ್ 1995


# ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ) ತನ್ನ 10ನೇ ವಾರ್ಷಿಕೋತ್ಸವದ ಅಂಗವಾಗಿ ದಿನಾಂಕ 10ನೇ ನವೆಂಬರ್ 95 ರಂದು ಬೆಂಗಳೂರಿನಲ್ಲಿ ಮೊದಲನೇ ರಾಜ್ಯ ಸಮ್ಮೇಳನವನ್ನು ಆಚರಿಸುತ್ತಿರುವ ವಿಷಯ ತಿಳಿದು ಸಂತೋಷವಾಯಿತು. ಈ ಸಂದರ್ಭದ ಸವಿನೆನಪಿಗಾಗಿ ಒಂದು ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವುದೂ ಸಂತೋಷದ ವಿಷಯ. ಅಂಗವಿಕಲ ನೌಕರರ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಿರುವ ಸಂಘ, ಸಮಾಜದ ಇತರ ಅಂಗವಿಕಲರು ಕೇವಲ ಕರುಣೆಯನ್ನು ನಿರೀಕ್ಷಿಸದೆ ತಾವು ಇತರರಂತೆ ಬಾಳುವುದು ಸಾಧ್ಯವೆಂಬ ಆತ್ಮಸ್ಥೈರ್ಯವನ್ನು ಪಡೆಯುವಲ್ಲಿ ಹಾಗೂ ಅವರಿಗೆ ನೀಡಬಹುದಾದಂಥ ಸಹಾಯವನ್ನು ನೀಡುವಲ್ಲಿ ಮುಂಚೂಣಿಯಲ್ಲಿರಲಿ ಎಂದು ಆಶಿಸಿ ಸಂಘಕ್ಕೆ ಹಾಗೂ ಸಮ್ಮೇಳನಕ್ಕೆ ಶುಭವನ್ನು ಹಾರೈಸುತ್ತೇನೆ.

**ರಮೇಶ ಸಿ. ಜಿಗಜಿಣಗಿ,**

ಸಮಾಜ ಕಲ್ಯಾಣ ಸಚಿವರು.


Karnataka State Government Disabled Employees Association
Renukaradhya S
Indresh R



ಕ.ಸಂ.ಮ.ಮ.ಕ.ರಾ.ಸ./91/1995

ದೂರವಾಣಿ : ಕಛೇರಿ : ೨೨೫೩೬೫೧
ನಿವಾಸ : ೩೩೩೫೧೯೦

ವಿಧಾನ ಸೌಧ, ಬೆಂಗಳೂರು – ೫೬೦ ೦೦೧
ದಿನಾಂಕ : 6ನೇ ಸೆಪ್ಟೆಂಬರ್ 1995

# ಸಂದೇಶ

ಕರ್ನಾಟಕರಾಜ್ಯ ಸರ್ಕಾರಿ ಅಂಗವಿಕಲರ ಸಂಘ 10 ನೇ ವಾರ್ಷಿಕೋತ್ಸವ ಸಮಾರಂಭವನ್ನು ಆಚರಿಸುತ್ತಿರುವ ವಿಚಾರ ತಿಳಿದು ಸಂತೋಷವಾಯಿತು.

ಅಂಗವಿಕಲರು ದೈಹಿಕವಾಗಿ ನ್ಯೂನ್ಯತೆ ಪಡೆದವರು ಆಗಿರುತ್ತಾರೆ. ಆದರೆ, ಸಾಮರ್ಥ್ಯದಿಂದ ಅವರು ಇತರರಿಗಿಂತ ಒಂದು ಕೈ ಮುಂದೆ ಎಂಬುದನ್ನು ಈತನಕ ಅವರು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಸಾಧನೆಯಿಂದ ತಿಳಿಯಬಹುದು. ಕ್ರೀಡೆ, ಸಂಗೀತ, ಶಿಕ್ಷಣ ಹಾಗೂ ಉದ್ಯಮಗಳಲ್ಲಿ ಅಂಗವಿಕಲರು ತಮ್ಮ ಪ್ರತಿಭೆಯನ್ನು ನಿರೂಪಿಸಿದ್ದಾರೆ. ಅದೇ ರೀತಿ ಸರ್ಕಾರಿ ಉದ್ಯೋಗದಲ್ಲೂ ಸಹ ಅಂಗವಿಕಲರು ಪ್ರಾಮಾಣಿಕತೆ ಹಾಗೂ ದಕ್ಷತೆಗೆ ಹೆಸರಾಗಿದ್ದಾರೆ. ಈ ಪರಂಪರೆಯನ್ನು ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಉದ್ಯೋಗದಲ್ಲಿರುವ ಅಂಗವಿಕಲರು ಮುಂದುವರೆಸಿಕೊಂಡು ಬರಬೇಕೆಂದು ಪ್ರಾರ್ಥಿಸುತ್ತೇನೆ. ತಮ್ಮ ಸಮ್ಮೇಳನವು ಸರ್ವ ರೀತಿಯಲ್ಲೂ ಯಶಸ್ವಿಯಾಗಲೆಂದು ಶುಭ ಹಾರೈಸುತ್ತೇನೆ.

**ಬಿ. ಟಿ. ಲಲಿತಾನಾಯಕ್,**
ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವರು.

Karnataka State Government Disabled Employees Association
Renukaradhya S
Indresh R




ದೂರವಾಣಿ : ೨೨೫೮೦೦೪

ನಿವಾಸ : ೩೩೧೦೧೩೬

ವಿಧಾನ ಸೌಧ, ಬೆಂಗಳೂರು –೫೬೦ ೦೦೧


ದಿನಾಂಕ : 15ನೇ ಸೆಪ್ಟೆಂಬರ್ 1995

# ಶುಭ ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು ಕಳೆದ 10 ವರ್ಷಗಳಿಂದ ರಾಜ್ಯದ ಸಮಸ್ತ ಅಂಗವಿಕಲ ನೌಕರರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆಯಾಗಿದ್ದು, ಸಂಘವು ತನ್ನ 10ನೇ ವಾರ್ಷಿಕೋತ್ಸವದ ಅಂಗವಾಗಿ ನವೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಏರ್ಪಡಿಸಿರುವ ಮೊದಲನೇ ರಾಜ್ಯ ಸಮ್ಮೇಳನವನ್ನು ನಡೆಸಲು ಉದ್ದೇಶಿಸಲಾಗಿದ್ದು, ಈ ಶುಭ ಸಂದರ್ಭದಲ್ಲಿ ಸಮ್ಮೇಳನದ ಸವಿನೆನಪಿಗಾಗಿ ತಮ್ಮ ಸಂಸ್ಥೆಯ ವತಿಯಿಂದ ಸ್ಮರಣ ಸಂಚಿಕೆಯನ್ನು ಹೊರತರಲು ಯೋಜಿಸಿರುವ ವಿಷಯ ತಿಳಿದು ಸಂತೋಷವಾಯಿತು.

ತಮ್ಮ ಸಂಸ್ಥೆಯ ಸೇವೆ ಇನ್ನೂ ಹೆಚ್ಚಿನದಾಗಿ ಅಂಗವಿಕಲ ನೌಕರರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುವಂತಾಗಲಿ ಹಾಗೂ ತಮ್ಮ ಈ ಉದ್ದೇಶಿತ ಪ್ರಯತ್ನ ಸಫಲಗೊಳ್ಳಲೆಂದು ಮನಸಾ ಹಾರೈಸುತ್ತೇನೆ.

**ಆರ್. ರೋಷನ್ ಬೇಗ್,**

ಬೆಂಗಳೂರು ನಗರಾಭಿವೃದ್ಧಿ ಮತ್ತು

ವಕ್ಫ್ ರಾಜ್ಯ ಸಚಿವರು.

Karnataka State Government Disabled Employees Association
Renukaradhya S
Indresh B



ವಿಧಾನ ಸೌಧ, ಬೆಂಗಳೂರು – ೫೬೦ ೦೦೧

ಡಿ.ಒ. ನಂ. ಸಿ.ಎಚ್ : ಎನ್ : 95

ದಿನಾಂಕ : 27ನೇ ಸೆಪ್ಟೆಂಬರ್ 1995

# ಸಂದೇಶ


ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು ಅಂಗವಿಕಲ ನೌಕರರ ಕ್ಷೇಮಾಭಿವೃದ್ಧಿಗಾಗಿ ರಚಿತವಾಗಿದ್ದು ಅದು ನವೆಂಬರ್ 1995 ರಲ್ಲಿ ರಾಜ್ಯ ಮಟ್ಟದ ಅಂಗವಿಕಲ ನೌಕರರ ಮಹಾಸಮ್ಮೇಳನವನ್ನು ತನ್ನ ಹತ್ತನೇ ವಾರ್ಷಿಕೋತ್ಸವದ ಅಂಗವಾಗಿ ಆಚರಿಸುತ್ತಿರುವ ವಿಚಾರ ತಿಳಿದು ನನಗೆ ಸಂತೋಷವಾಗಿದೆ.

ಈ ಮೊಟ್ಟಮೊದಲ ಮಹಾಸಮ್ಮೇಳನದ ಸಂದರ್ಭದಲ್ಲಿ ಅದರ ಆಚರಣೆಯ ಸವಿನೆನಪಿಗಾಗಿ ಸಂಘವು ಸ್ಮರಣ ಸಂಚಿಕೆಯೊಂದನ್ನು ಹೊರತರುತ್ತಿರುವುದು ಶ್ಲಾಘನೀಯ.

ಈ ಮಹಾಸಮ್ಮೇಳನದ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಲೆಂದು ಹಾರೈಸುತ್ತೇನೆ.

Karnataka State Government Disabled Employees Association
Renukaradhya S
Indresh R

**ಎಸ್. ಬಿ. ಮುದ್ದಪ್ಪ,**
ಸರ್ಕಾರದ ಮುಖ್ಯ ಕಾರ್ಯದರ್ಶಿ.



ದೂರವಾಣಿ : ಕಛೇರಿ : 77121
ಶ್ರೀ ಧರ್ಮಸ್ಥಳ – 574 216
ಕರ್ನಾಟಕ.

ದಿನಾಂಕ : 4ನೇ ಸೆಪ್ಟೆಂಬರ್ 1995

## ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು 10 ವರ್ಷಗಳ ಸಾರ್ಥಕ ಸೇವೆಯನ್ನು ಸಲ್ಲಿಸಿದ್ದು, ನವೆಂಬರ್ ತಿಂಗಳಲ್ಲಿ ಸಂಘದ ವಾರ್ಷಿಕೋತ್ಸವವನ್ನು ಆಚರಿಸಲಿರುವ ವಿಚಾರ ತಿಳಿದು ಸಂತೋಷವಾಯಿತು.


ಈ ಶುಭ ಸಂದರ್ಭದಲ್ಲಿ ಸ್ಮರಣ ಸಂಚಿಕೆಯೊಂದನ್ನು ಪ್ರಕಟಿಸಲಿರುವುದು ಸ್ತುತ್ಯಾರ್ಹ ಹಾಗೂ ಸಕಾಲಿಕವಾದುದು. ಸಂಘದ ಧ್ಯೇಯೋದ್ದೇಶ ಹಾಗೂ ಪ್ರಗತಿ–ಸಾಧನೆಯನ್ನು ಚಿತ್ರಿಸಬಲ್ಲ ವಿವಿಧ ಉತ್ತಮ ವಿಚಾರಪೂರ್ಣ ಲೇಖನಗಳಿಂದೊಡಗೂಡಿ ಸಂಚಿಕೆಯು ಪ್ರಕಟವಾಗಲೆಂದು ಆಶಿಸುತ್ತೇನೆ.

ಈ ದಿಸೆಯಲ್ಲಿ ನಿಮ್ಮೆಲ್ಲ ಪ್ರಯತ್ನ–ಪರಿಶ್ರಮ ಸಫಲವಾಗುವಂತೆ ಶ್ರೀ ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

ಇತಿ,

ಡಿ. ವೀರೇಂದ್ರ ಹೆಗ್ಗಡೆ.

Karnataka State Government Disabled Employees Association
Renukaradhya S
Indresh R



ಬೆಂಗಳೂರು

ದಿನಾಂಕ : 2ನೇ ನವೆಂಬರ್ 1995

# ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ) ವು ತನ್ನ ಹತ್ತನೆಯ ವಾರ್ಷಿಕೋತ್ಸವವನ್ನು 10ನೇ ನವೆಂಬರ್ 1995 ರಂದು ಬೆಂಗಳೂರಿನಲ್ಲಿ ಆಚರಿಸುತ್ತಿರುವುದು ತುಂಬಾ ಸಂತಸದ ಸಂಗತಿ. ಅಂಗವಿಕಲ ನೌಕರರ ಮೊದಲನೇ ರಾಜ್ಯ ಸಮ್ಮೇಳನದ ಈ ಶುಭ ಸಂದರ್ಭದಲ್ಲಿ ಈ ಸಮ್ಮೇಳನದ ಸವಿನೆನಪಿಗಾಗಿ ಒಂದು ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವುದು ಕೂಡ ಸಂದರ್ಭೋಚಿತ ಮತ್ತು ಪ್ರಶಂಶನೀಯ ವಿಷಯವಾಗಿದೆ.

ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು ತನ್ನ ಸದಸ್ಯರ ಸೇವಾಭದ್ರತೆ ಮತ್ತು ಅರ್ಹಸೌಲಭ್ಯಗಳನ್ನು ಪಡೆಯುವಲ್ಲಿ ಗಣನೀಯ ಯಶಸ್ಸು ಸಾಧಿಸಿದೆ ಎಂದು ತಿಳಿದು ತುಂಬಾ ಹರ್ಷಿತನಾಗಿದ್ದೇನೆ. ಬಾಕಿ ಇರುವ ಇನ್ನುಳಿದ ಬೇಡಿಕೆಗಳು ಈಡೇರಲು ಸಂಘದ ಪದಾದಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡುವರೆಂಬ ನಂಬಿಕೆ, ವಿಶ್ವಾಸ ನನಗಿದೆ.

ಹತ್ತನೇ ವಾರ್ಷಿಕೋತ್ಸವದ ಈ ಶುಭ ಸಂದರ್ಭದ ಸವಿನೆನಪಿನೊಂದಿಗೆ ಹೊರಬರಲಿರುವ ಸ್ಮರಣ ಸಂಚಿಕೆಯು ವೈವಿದ್ಯತೆಯಿಂದ ಕೂಡಿದ್ದು, ಸರ್ಕಾರಿ ಅಂಗವಿಕಲ ನೌಕರರಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಪ್ರತಿಭೆಯನ್ನು ಪ್ರತಿಬಿಂಬಿಸುವಂತಹ ಸುಂದರ ಕೃತಿಯಾಗಿ ಮೂಡಿಬರಲೆಂದು ಈ ಸಂದರ್ಭದಲ್ಲಿ ತುಂಬು ಮನದಿಂದ ಶುಭಹಾರೈಸುತ್ತೇನೆ.

ವಿಶ್ವಾಸಪೂರ್ವಕವಾಗಿ


**ಎಲ್. ಬೋರಯ್ಯ**, ಬಿ.ಎ., ಎಲ್‌ಎಲ್.ಬಿ

ಉಪಧ್ಯಕ್ಷರು,

ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ

ಕಲ್ಕತ್ತ.

Karnataka State Government Disabled Employees Association
Renukaradhya S
Indresh R



ದೂರವಾಣಿ : 2264784
ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ
ಅಂಚೆ ಪೆಟ್ಟಿಗೆ ನಂ. 592
ಕಬ್ಬನ್ ಉದ್ಯಾನವನ, ಬೆಂಗಳೂರು
ನಂ. ಜಿಇಎ 3074 : 95–96
ದಿನಾಂಕ : 31ನೇ ಆಗಸ್ಟ್ 1995

# ಸಂದೇಶ

ಕರ್ನಾಟಕ ರಾಜ್ಯ ಅಂಗವಿಕಲ ಸರ್ಕಾರಿ ನೌಕರರ ಸಂಘವು ಹತ್ತನೇ ವರ್ಷಕ್ಕೆ ಕಾಲಿಟ್ಟ ಶುಭ ಸಂದರ್ಭದಲ್ಲಿ ಸಂಘದ ಪ್ರಥಮ ಮಹಾ ಸಮ್ಮೇಳನವನ್ನು ನಡೆಸುತ್ತಿರುವ ವಿಷಯ ನನ್ನಲ್ಲಿ ತುಂಬ ಹರ್ಷವನ್ನುಂಟು ಮಾಡಿದೆ. ಅಂಗವಿಕಲರ ಬಗ್ಗೆ ಸಮಾಜ ತಳೆದಿರುವ ದೋರಣೆ ಪರಿಹಾರದ ಜೊತೆಗೆ ಅಂಗವಿಕಲ ನೌಕರರ ಪ್ರಮುಖ ಬೇಡಿಕೆ ಹಾಗೂ ಸಮಸ್ಯೆಗಳ ಈಡೇರಿಕೆಗೆ ಈ ಸಮ್ಮೇಳನ ದಾರಿದೀಪವಾಗಲೆಂದು ಈ ಸಂದರ್ಭದಲ್ಲಿ ಶುಭ ಹಾರೈಸುತ್ತೇವೆ. ಅಂಗವಿಕಲರ ಸಮಸ್ಯೆಗಳ ಪರಿಹಾರದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘವು ಪ್ರಥಮ ಆದ್ಯತೆಯನ್ನು ನೀಡುತ್ತಾ ಬಂದಿದ್ದು ಇಂತಹ ನೌಕರರಲ್ಲಿ ಮನೋಸ್ಥೈರ್ಯ ತುಂಬಲು ಸಂಘವು ಮುಂದೆಯೂ ಸಹ ಶ್ರಮಿಸುತ್ತದೆಂಬ ಆಶಾಭಾವನೆಯನ್ನು ವ್ಯಕ್ತಪಡಿಸುತ್ತಾ ಸಮ್ಮೇಳನವು ಪೂರ್ಣ ಯಶಸ್ವಿಗೊಳ್ಳಲೆಂದು ಹಾರೈಸುತ್ತೇವೆ. ಅಂತೆಯೇ ಈ ಶುಭ ಸಂದರ್ಭದಲ್ಲಿ ಹೊರ ತರಲಿರುವ ಸ್ಮರಣ ಸಂಚಿಕೆಯೂ ಉತ್ತಮ ಕೃತಿಗಳನ್ನು ಹೊತ್ತು ಸುಂದರವಾಗಿ ಮೂಡಿ ಬರಲೆಂದು ಶುಭ ಹಾರೈಸುತ್ತೇವೆ.

**ಕೆ. ಸಿಪ್ಪೇಗೌಡ,**
ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು,
ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ
ಕಲ್ಕತ್ತ.

Karnataka State Government Disabled Employees Association
Renukaradhya S
Indresh R

# ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಕೇಂದ್ರ ಸಂಘದ ಪದಾಧಿಕಾರಿಗಳು




ಶ್ರೀ ಬೋರೇಗೌಡ, ಎಂ.ಎಸ್.ಸಿ.
ಗೌರವ ಅಧ್ಯಕ್ಷರು




ಶ್ರೀ ಕೆ. ಕೆಂಚೇಗೌಡ
ಅಧ್ಯಕ್ಷರು




ಶ್ರೀ ಎಸ್. ರೇಣುಕಾರಾಧ್ಯ, ಎಂ.ಎ.
ಉಪಾಧ್ಯಕ್ಷರು



ಶ್ರೀ ಹೆಚ್. ಎಸ್. ಜಯದೇವಯ್ಯ
ಉಪಾಧ್ಯಕ್ಷರು



ಶ್ರೀ ಬಿ.ಎಲ್. ಲಿಂಗೇಗೌಡ
ಪ್ರಧಾನ ಕಾರ್ಯದರ್ಶಿ



ಶ್ರೀ ಕೆ.ವಿ. ಮುನಿಯಪ್ಪ
ಖಜಾಂಚಿ


Karnataka State Government Disabled Employees Association
Renukaradhya S
Indresh R



ಶ್ರೀ ಜವರಯ್ಯ
ಜಂಟೀಕಾರ್ಯದರ್ಶಿ




ಶ್ರೀಮತಿ ಎನ್. ಲಲಿತ
ಜಂಟೀಕಾರ್ಯದರ್ಶಿ



ಶ್ರೀ ಪುರುಷೋತ್ತಮ
ಸಂಘಟನಾ ಕಾರ್ಯದರ್ಶಿ

# ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಕೇಂದ್ರ ಸಂಘದ ಪದಾಧಿಕಾರಿಗಳು




ಶ್ರೀ ಜಿ. ಚೋಮನಾಯಕ್
ಸಾಂಸ್ಕೃತಿಕ ಕಾರ್ಯದರ್ಶಿ




ಶ್ರೀಮತಿ ವೆಂಕಟಲಕ್ಷ್ಮಮ್ಮ
ಸಾಂಸ್ಕೃತಿಕ ಕಾರ್ಯದರ್ಶಿ




ಶ್ರೀಮತಿ ವನಮಾಲ
ಮಹಿಳಾ ಪ್ರತಿನಿಧಿ




ಶ್ರೀ ಮುನಿರಾಜು
ವಿಶೇಷ ಆಹ್ವಾನಿತರು




ಶ್ರೀ ಶಂಕರಸಿಂಗ್
ವಿಶೇಷ ಆಹ್ವಾನಿತರು




ಶ್ರೀ ನಾಗರಾಜ್
ವಿಶೇಷ ಆಹ್ವಾನಿತರು



ಶ್ರೀ ಪೀಡಶೆಟ್ಟಿ
ಬೆಳಗಾವಿ ಜಿಲ್ಲಾ ಅಧ್ಯಕ್ಷರು



ಶ್ರೀ ಎಸ್. ಜಿ. ಮಹೇಶ್
ದ.ಕ. ಜಿಲ್ಲಾ ಅಧ್ಯಕ್ಷಕು



ಶ್ರೀ ಉಮ್ರಾಣಿ
ಬಿಜಾಪುರ ಜಿಲ್ಲಾ ಅಧ್ಯಕ್ಷರು

Karnataka State Government Disabled Employees Association
Renukaradhya S
Indresh R



ಸ್ಮರಣ ಸಂಚಿಕೆ ಸಮಿತಿ

Karnataka State Government Disabled Employees Association
Renukaradhya S
Indresh R



ಹಣಕಾಸು ಸಮಿತಿ




ಕೇಂದ್ರ ಸಂಘದ ಪದಾಧಿಕಾರಿಗಳು

Karnataka State Government Disabled Employees Association
Renukaradhya S
Indresh R




ಆಹಾರ ಸಮಿತಿ



ಪ್ರಚಾರ ಸಮಿತಿ

Karnataka State Government Disabled Employees Association
Renukaradhya S
Indresh R



ಸಿದ್ಧತಾ ಸಮಿತಿ



ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರು

Karnataka State Government Disabled Employees Association
Renukaradhya S
Indresh R



ಮೈಸೂರಿನ ಟೌನ್‌ಹಾಲ್‌ನಲ್ಲಿ ನಡೆದ ಮೈಸೂರು ಜಿಲ್ಲಾ ಸಮ್ಮೇಳನದಲ್ಲಿ ಲೋಕಸಭಾ ಸದಸ್ಯರಾದ ಶ್ರೀ ಶ್ರೀನಿವಾಸಪ್ರಸಾದ್ ಹಾಗೂ ಇತರ ಪದಾದಿಕಾರಿಗಳು